**ದಿನಾಂಕ 20-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿಯರ ಪರ ವಕೀಲರಿಂದಃ**

ನಾನು 2 ನೇ ಪ್ರತಿವಾದಿ ಸಂಘದ ಸದಸ್ಯನಾಗಿ 30 ವರ್ಷಗಳಿಂದ ಇರುತ್ತೇನೆ. ವಿಶ್ವಕರ್ಮ ಒಕ್ಕೂಟ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಸಂಘದಲ್ಲಿ ಆಗುವ ಎಲ್ಲಾ ಚಟುವಟಿಕೆಯಲ್ಲಿ ಭಾಗವಹಿಸುತ್ತೇನೆ. ನಾನು ಭಾಗಿಯಾಗಿದ್ದಕ್ಕೆ ಸಹಿ ಮಾಡುತ್ತೇನೆ. ನಾನು ಸದಸ್ಯ ಎಂದು ತೋರಿಸಲು ದಾಖಲೆ ಇರುತ್ತದೆ. 2 ನೇ ಪ್ರತಿವಾದಿ ಕಟ್ಟಡದ ಒಂದು ಜಾಗದಲ್ಲಿ ಸಂಘ ನಡೆಸುತ್ತಿದ್ದ ಬಗ್ಗೆ ಬರೆದಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಕಾರಣ ಅದು ಅದ್ಯಕ್ಷರಿಗೆ ಗೊತ್ತಿರುತ್ತದೆ. ಶಂಕ್ರಯ್ಯ ಆಚಾರಿ ಅವರು ಬದುಕಿರುವಾಗ ಕಟ್ಟಡದ ಒಂದು ಭಾಗದಲ್ಲಿ ಚಟುವಟಿಕೆ ನಡೆಸುತ್ತಿದ್ದ ಬಗ್ಗೆ ದಾಖಲೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ವಿಶ್ವಕರ್ಮ ಸಂಘದವರು ಮೆಡಿಕಲ್ ಕ್ಯಾಂಪ್ ನಡೆಸಿದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ ಆದರೆ ಸಂಘದಲ್ಲಿ ದಾಖಲೆ ಇರುತ್ತದೆ. ಸಂಘದಲ್ಲಿ ನಿರ್ಣಯ ಮಾಡಿ ಕಾರ್ಯಕ್ರಮ ಮಾಡುತ್ತಿದ್ದರು ಈ ಬಗ್ಗೆ ಸಂಘದ ಪುಸ್ತಕದಲ್ಲಿ ದಾಖಲಾಗಿದೆ. ಶಂಕ್ರಯ್ಯ ಆಚಾರಿರವರು ವಾದಿ ಒಕ್ಕೂಟದಲ್ಲಿ ಸದಸ್ಯರಾಗಿರಲಿಲ್ಲ. ಶಂಕ್ರಯ್ಯ ಆಚಾರಿ 2 ನೇ ಪ್ರತಿವಾದಿ ಸಂಘದಲ್ಲಿ ಅದ್ಯಕ್ಷರಾಗಿದ್ದರು ಮತ್ತು ಸದಸ್ಯರಾಗಿದ್ದರು.

ಶಂಕ್ರಯ್ಯ ಆಚಾರಿ ರವರು 2 ನೇ ಪ್ರತಿವಾದಿ ಸಂಘದ ಕ್ರಿಯಾಶೀಲ ವ್ಯಕ್ತಿಯಾಗಿದ್ದರು ಮತ್ತು ಸದಸ್ಯರಾದ ಬಗ್ಗೆ ದಾಖಲೆ ನೋಡಿದೇನೋ ಇಲ್ಲವೋ ನೆನಪಿಲ್ಲ. ವಿಶ್ವಕರ್ಮ ಸಂಘ ನಮ್ಮ ಸಂಘ ಆಗಿರುತ್ತದೆ. ವಿಶ್ವಕರ್ಮ ಸಂಘ ಬೇರೆ ಮತ್ತು ವಿಶ್ವಕರ್ಮ ಒಕ್ಕೂಟ ಬೇರೆ ಬೇರೆ ಯಾಗಿರುತ್ತದೆ. ವಿಶ್ವಕರ್ಮ ಒಕ್ಕೂಟ ಉಡುಪಿ ಮತ್ತು ದಕ್ಷಿಣ ಕನ್ನಡದಲ್ಲಿ ವ್ಯವಹಾರ ನಡೆಸುತ್ತದೆ ಎಂದರೆ ಗೊತ್ತಿಲ್ಲ. ಶಂಕ್ರಯ್ಯ ಆಚಾರಿ ವಾದಿ ಒಕ್ಕೂಟದಲ್ಲಿ ಸದಸ್ಯರಾಗಿಲಿಲ್ಲ ಎಂದು ಯಾವ ಆದಾರದಲ್ಲಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರು ಸಂಘದ ಸದಸ್ಯರಾಗಿದ್ದರು ಕಾಲಾನಂತರ ಸಂಘವನ್ನು ನೋಡಿಕೊಂಡು ಹೋಗಿ ಎಂದು ಹೇಳುತ್ತಿದ್ದರು ಅದರ ಆಧಾರದ ಮೇಲೆ ನಾನು ಹೇಳುತ್ತೇನೆ. ಶಂಕ್ರಯ್ಯ ಆಚಾರಿ ವೀಲುನಾಮೇ ಬರೆದಿಲ್ಲ.

ಶಂಕ್ರಯ್ಯ ಆಚಾರಿ ಬರೆದುಕೊಟ್ಟಿದ್ದ ವೀಲುನಾಮೆಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ವೀಲುನಾಮೆ ಬರೆದಿಲ್ಲ ಎಂದು ತಿಳಿಸಿರುತ್ತಾರೆ. 2 ನೇ ಪ್ರತಿವಾದಿ ಸಂಘಕ್ಕೆ ದಾವಾ ಆಸ್ತಿಯಲ್ಲಿ ಯಾವ ಹಕ್ಕು ಇದೆ ಎಂದು ದಾಖಲೆ ಇದೆ ಎಂದರೆ ಯಾವುದೇ ದಾಖಲೆ ಇಲ್ಲ ಮೌಖಿಕವಾಗಿ ಹೇಳಿದ್ದಾರೆ ಎಂದು ತಿಳಿಸಿರುತ್ತಾರೆ. ವಾದಿಯ ದಾವಾ ಸ್ವತ್ತನ್ನು ಒಳಗೆ ಹಾಕಿಲು 2 ನೇ ಪ್ರತಿವಾದಿ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.